## ಪರಮಾತ್ಮ ಮಿಲನದ ಮೇಳದ ಉಡುಗೊರೆ – ಕಿರೀಟ, ಸಿಂಹಾಸನ ಮತ್ತು ತಿಲಕ

ಇಂದು ಬೇಹದ್ದಿನ ತಂದೆ ಬೇಹದ್ದಿನ ಎಲ್ಲಾ ಮಕ್ಕಳನ್ನು ನೋಡುತ್ತಿದ್ದಾರೆ. ಬೇಹದ್ದಿನ ತಂದೆಯಾಗಿದ್ದಾರೆ ಮತ್ತು ತಾವೆಲ್ಲರೂ ಸಹ ಬೆಹದ್ದಿನ ಮಾಲೀಕರು ಬಾಲಕರಾಗಿದ್ದೀರಾ. ಬಾಪ್ದಾದಾರವರು ಎಲ್ಲಾ ಸ್ನೇಹಿ ಸಹಯೋಗಿ ಮಕ್ಕಳನ್ನು ನೋಡಿ ಹರ್ಷಿತರಾಗುತ್ತಿದ್ದಾರೆ ಹಾಗೂ ಮಕ್ಕಳು ಸಹ ತಂದೆಯನ್ನು ನೋಡಿ ಹರ್ಷಿತರಾಗುತ್ತಿದ್ದಾರೆ. ತಂದೆಗೆ ಜಾಸ್ತಿ ಖುಷಿಯಿದೆಯೇ? ಅಥವಾ ಮಕ್ಕಳಿಗೆ ಜಾಸ್ತಿ ಖುಷಿಯಿದೆಯೇ? – ಏನು ಹೇಳುವಿರಿ? ಇಬ್ಬರದ್ದು – ಇದಕ್ಕೆ ಹೇಳಲಾಗುತ್ತದೆ ಪರಮಾತ್ಮನ ಮಿಲನದ ಮೇಳ. ಮೇಳಗಳಂತು ಬಹಳಷ್ಟು ಇದ್ದೆ ಇರುತ್ತದೆ ಆದರೆ ಪರಮಾತ್ಮನ ಮಿಲನದ ಮೇಳ ಒಂದೇ ಸಂಗಮಯುಗದಲ್ಲಿ ಇರುತ್ತದೆ. ಇಡೀ ಕಲ್ಪದಲ್ಲಿ ಇರುವುದಕ್ಕೆ ಸಾಧ್ಯವಿಲ್ಲ. ಈಗ ಆಗುತ್ತಿದೆ ಮತ್ತು ಆಗುತ್ತದೆ. ತಮ್ಮೆಲ್ಲರಿಗೆ ಈ ಮೇಳ ಇಷ್ಟವಾಗುತ್ತಿದೆಯಲ್ಲವೇ? ಬಾಪ್ದಾದಾರವರು ಮಕ್ಕಳ ಭಾಗ್ಯವನ್ನು ನೋಡಿ ಹರ್ಷಿತರಾಗುತ್ತಾರೆ ಮತ್ತು ಹೃದಯದ ಗೀತೆಯನ್ನು ಹಾಡುತ್ತಿರುತ್ತಾರೆ – ವಾಹ್ ನನ್ನ ಮಕ್ಕಳೇ ವಾಹ್! ಯಾವ ಭಾಗ್ಯವು ಸ್ವಪ್ನದಲ್ಲೂ ಇರಲಿಲ್ಲ ಸಂಕಲ್ಪದಲ್ಲೂ ಇರಲಿಲ್ಲ ಆದರೆ ಈಗ ಸಾಕಾರದಲ್ಲಿ ಶ್ರೇಷ್ಠ ಭಾಗ್ಯದ ಅನುಭವ ಮಾಡುತ್ತಿದ್ದೀರಿ. ಪ್ರತಿಯೊಬ್ಬರ ಮಸ್ತಕದ ಮೇಲೆ ಶ್ರೇಷ್ಠ ಭಾಗ್ಯದ ರೇಖೆ ಹೊಳೆಯುತ್ತಿದೆ. ಎಲ್ಲರು ಹೊಳೆಯುತ್ತಿರುವಂತಹ ನಕ್ಷತ್ರಗಳಾಗಿದ್ದೀರಲ್ಲವೇ? ತಮ್ಮ ಶ್ರೇಷ್ಠ ಭಾಗ್ಯದ ಸ್ಮೃತಿಯಲ್ಲಿರುತ್ತಿರಲ್ಲವೇ. ಏಕೆ ಶ್ರೇಷ್ಠ ಭಾಗ್ಯವಿದೆ? ಏಕೆಂದರೆ ಭಾಗ್ಯವಿಧಾತ ಮುಖಾಂತರ ತಾವು ಭಾಗ್ಯವಂತ ಆತ್ಮಗಳಿಗೆ ದಿವ್ಯ ಬ್ರಾಹ್ಮಣ ಜನ್ಮ ಸಿಕ್ಕಿದೆ. ತಂದೆಯನ್ನು ಭಾಗ್ಯವಿಧಾತನೆಂದು ಹೇಳುತ್ತಾರೆ. ಹಾಗೂ ಬ್ರಹ್ಮಾ ತಂದೆಯನ್ನು ಭಾಗ್ಯವಿಧಾತನೆಂದು ಹೇಳುತ್ತಾರೆ. ಹಾಗೂ ತಮ್ಮೆಲ್ಲರ ಜನ್ಮ ಬಾಪ್ದಾದಾರವರ ಮುಖಾಂತರ ಆಗಿದೆ. ಯಾರ ತಂದೆ ಸ್ವಯಂ ಭಾಗ್ಯವಿಧಾತರಾಗಿದ್ದಾರೆ ಅವರ ಭಾಗ್ಯ ಎಷ್ಟು ಶ್ರೇಷ್ಠವಾಗಿರಬಹುದು. ಪರಮಾತ್ಮ ಮಿಲನವನ್ನು ಆಚರಿಸುತ್ತಿದ್ದೀರಲ್ಲವೇ! (ಡಬಲ್ ವಿದೇಶಿಯವರ ಜೊತೆ) ಇವರು ಸಹ ಆಚರಿಸುತ್ತಿದ್ದಾರೆ! ಬೇಹದ್ದಿನ ಮೇಳದಲ್ಲಿ ಒಂದುವೇಳೆ ಡಬಲ್ ವಿದೇಶಿಗಳು ಇರುವುದಿಲ್ಲವೆಂದರೆ ಬೇಹದ್ದಿನದೆಂದು ಹೇಳಲಾಗುವುದಿಲ್ಲ. ತಮ್ಮೆಲ್ಲರದು ವಿಶೇಷ ಪಾತ್ರವಿದೆ, ಯಾವುದನ್ನು ತಂದೆ ಮತ್ತು ಸರ್ವ ಮಕ್ಕಳು ನೋಡಿ ನೋಡಿ ಹರ್ಷಿತರಾಗುತ್ತಾರೆ. ಭಾಗ್ಯವಿಧಾತನ ಮುಖಾಂತರ ಜನ್ಮವಾಗುವುದು – ಇದು ಎಲ್ಲದಕ್ಕಿಂತ ನಂ. 1 ಭಾಗ್ಯವಾಗಿದೆ. ಜೊತೆ-ಜೊತೆ ಇಡೀ ಕಲ್ಪದಲ್ಲಿ ಯಾವುದೇ ಜನ್ಮದಲ್ಲಿ ಒಬ್ಬ ಪರಮಾತ್ಮ ತಂದೆಯು ಸಹ ಆಗುತ್ತಾರೆ, ಶಿಕ್ಷಕನು ಸಹ ಆಗುತ್ತಾರೆ ಸದ್ಗುರುವು ಸಹ ಆಗುತ್ತಾರೆ, ಸರ್ವ ಸಂಬಂಧಗಳನ್ನು ನಿಭಾಯಿಸುವುದು – ಇದು ಸತ್ಯಯುಗದಿಂದ ಹಿಡಿದು ಕಲಿಯುಗದವರೆಗೆ ಯಾರಿಗಾದರೂ ಇಂತಹ ಭಾಗ್ಯ ಸಿಕ್ಕಿದೆಯೇ? ಹಾಗೂ ಈಗ ತಮಗೆ ಸಿಕ್ಕಿದೆ! ಈಗ ತಾವು ನಿಶ್ಚಯ ಹಾಗೂ ನಶೆಯಿಂದ ಹೇಳುತ್ತೀರಾ - ನಮ್ಮ ಪಾಲನಕರ್ತ ಪರಮಾತ್ಮನಾಗಿದ್ದಾರೆ. ಪ್ರಪಂಚದವರು ಹೇಳುವ ಮಾತ್ರದಲ್ಲಿ ಹೇಳುತ್ತಾರೆ - ಪರಮಾತ್ಮ ನಮ್ಮ ಪಾಲನೆ ಮಾಡುತ್ತಿದ್ದಾರೆಯೆಂದು ಹೇಳುತ್ತಾರೆ. ಆದರೆ ತಾವು ಪ್ರತ್ಯಕ್ಷ ಅನುಭವದಿಂದ ಹೇಳುತ್ತೀರಾ ಪರಮತ್ಮ ತಂದೆಯಾಗಿದ್ದಾರೆ ಹಾಗೂ ತಂದೆಯೇ ಪಾಲನಾಕರ್ತರು, ಪಾಲನೆಯನ್ನು ಮಾಡುತ್ತಿದ್ದಾರೆ! ನಶೆಯಿದೆಯಲ್ಲವೇ! ಅಥವಾ ಸ್ವಲ್ಪ-ಸ್ವಲ್ಪ ಮರೆತು ಹೋಗುತ್ತೀರಾ? ನಡೆಯುತ್ತಾ-ನಡೆಯುತ್ತಾ ತಮ್ಮ ಶ್ರೇಷ್ಠ ಭಾಗ್ಯವನ್ನು ಸಾಧಾರಣವೆಂದು ತಿಳಿದು ಬಿಡುತ್ತಿರಾ? ಇರುವುದೇ ಶ್ರೇಷ್ಠ ಆದರೆ ಸಾಧಾರಣವೆಂದುಕೊಳ್ಳುತ್ತೀರಾ. ಇದಕ್ಕಾಗಿ ಯಾವ ನಶೆ ಮತ್ತು ಖುಷಿಯ ಹೊಳಪು ಸದಾ ಇರಬೇಕು, ಅದು ಇರುವುದಿಲ್ಲ. ಹೇಗೆ ಒಂದು ಸೆಕೆಂಡ್ನ್ನು ಸಹ ಮರೆಯುವುದಕ್ಕೆ ಸಾಧ್ಯವಿಲ್ಲ ಆದರೆ ಸಾಧಾರಾಣವೆಂದು ತಿಳಿಯುವ ಕಾರಣ ತಂದೆಯು ಸಿಕ್ಕಿಬಿಟ್ಟರು, ನಮ್ಮವರಾಗಿಬಿಟ್ಟರು, ನಾವು ಸಹ ತಂದೆಯವರಾಗಿಬಿಟ್ಟೆವು... ಯಾವಾಗ ನಮ್ಮವರಾದರೆಂದರೆ ನಶೆಯಿರಬೇಕಲ್ಲವೇ? ಆದರೆ ಕೆಲವೊಮ್ಮೆ ಶ್ರೇಷ್ಠ, ಕೆಲವೊಮ್ಮೆ ಮಧ್ಯಮ, ಕೆಲವೊಮ್ಮೆ ಸಾಧಾರಣವಾಗಿಬಿಡುತ್ತದೆ. ಯೋಚಿಸಿ, ನಮ್ಮ ತಂದೆ ಪರಮಾತ್ಮನಾಗಿದ್ದಾರೆ! ಹಾಗೂ ಪುನಃ ಶಿಕ್ಷಕರಾಗಿದ್ದಾರೆ! ಯಾವ ಶಿಕ್ಷಣವನ್ನು ಕೊಟ್ಟರು? ತಮ್ಮನ್ನು ಏನು ಮಾಡಿಬಿಟ್ಟರು? ತ್ರಿನೇತ್ರಿ, ತ್ರಿಕಾಲದರ್ಶಿ, ತ್ರಿಲೋಕಿನಾಥ. ಇಂತಹ ವಿದ್ಯೆಯನ್ನು ಯಾರದರೂ ಓದುತ್ತಾರೆಯೇ! ಇದುವರೆಗೂ ಇಂತಹ ಡಿಗ್ರಿಯನ್ನು ಇದೆಯಂದು ಕೇಳಿದ್ದೀರಾ? ಜಡ್ಜ, ಬ್ಯಾರಿಸ್ಟರ್, ಡಾಕ್ಟರ್, ಇಂಜಿನಿಯರ್ ಇಂತಹ ಎಲ್ಲಾ ಡಿಗ್ರಿಗಳನ್ನು ನೋಡಿದ್ದೀವೆ ಆದರೆ ತ್ರಿಲೋಕಿನಾಥ, ತ್ರಿಕಾಲದರ್ಶಿ, ತ್ರಿನೇತ್ರಿ, ಜ್ಞಾನಪೂರ್ಣ... ಇಂತಹ ಡಿಗ್ರಿಯನ್ನು ಎಲ್ಲಾದರು ನೋಡಿದ್ದೀರಾ? ದ್ವಾಪರದಿಂದ ಕಲಿಯುಗದವರೆಗೂ ಯಾರಿಗಾದರೂ ಸಿಕ್ಕಿದೆಯೇ? ಇಂತಹ ಶಿಕ್ಷಕ ನಮ್ಮವರಾಗಿದ್ದಾರೆ. ವಿಜ್ಞಾನದವರು ವಿಜ್ಞಾನದ ಎಷ್ಟೇ ಯೋಜನೆಗಳನ್ನು ಮಾಡಿದರು ಸಹ ತ್ರಿಲೋಕದವರೆಗೆ ತಲುಪಲು ಸಾಧ್ಯವಿಲ್ಲ. ಮೂರು ಲೋಕದ ಜ್ಞಾನವನ್ನು ಪ್ರಾಪ್ತಿ ಮಾಡಿಕೊಳ್ಳಲು ಸಾಧ್ಯವಿಲ್ಲ. ಹಾಗೂ ತಮ್ಮಲ್ಲಿ ಐದು ವರ್ಷದ ಮಗುವು ಸಹ ಮೂರು ಲೋಕದ ಜ್ಞಾನವನ್ನು ಕೊಡುತ್ತಾರೆ! ಅದು ನಶೆಯಿಂದ ಹೇಳುತ್ತಾರೆ - ಹೌದು, ಸೂಕ್ಷ್ಮ ವತನವಿದೆ, ಮೂಲ ವತನವಿದೆಯೆಂದು. ಪರಮ ಆತ್ಮ ಶಿಕ್ಷಕರು ಸಹ ಆಗಿದ್ದಾರೆ. ಶ್ರೇಷ್ಠ ಶಿಕ್ಷಣದಿಂದ ಈ ಡಿಗ್ರಿಯನ್ನು ಪ್ರಾಪ್ತಿ ಮಾಡಿಸಿದರು. ಆದರೆ ಪ್ರಪಂಚದಲ್ಲಿ ಎಲ್ಲದಕ್ಕಿಂತ ದೊಡ್ಡದಕ್ಕಿಂತ ದೊಡ್ಡ ಪದವಿ ರಾಜ್ಯ ಪದವಿಯಾಗಿರುತ್ತದೆ. ಅಂದಾಗ ವಿದ್ಯೆಯಿಂದ ಪದವಿಯು ಸಹ ಸಿಗುತ್ತದೆಯಲ್ಲವೇ. ನಿಮ್ಮನ್ನು ರಾಜರನ್ನಾಗಿ ಮಾಡಿದರಲ್ಲವೇ? ಈಗ ರಾಜರಾಗಿದ್ದೀರಾ ಅಥವಾ ಆಗಬೇಕಾ? ರಾಜರಂತು ಆಗಿದ್ದೀರಾ ಆದರೆ ಕೆಳಗಡೆ(ನೆಲದಲ್ಲಿ) ಇದ್ದೀರಿ! ಪಕ್ಕಾ ಮನೆಯು ಸಹ ಇಲ್ಲ. ಟೆಂಟ್ನಲ್ಲಿ ಕುಳಿತ್ತಿದ್ದೀರಿ! ಹಾಗಾದರೆ ನೋಡಿ

ಶ್ರೇಷ್ಠದರಲ್ಲು ಶ್ರೇಷ್ಠ ಪದವಿ ರಾಜ ಪದವಿಯಾಗಿದೆ. ಈಗಲೂ ಸ್ವರಾಜ್ಯ ಅಧಿಕಾರಿಗಳಾಗಿದ್ದೀರಾ ಹಾಗೂ ಭವಿಷ್ಯದಲ್ಲೂ ಸಹ ವಿಶ್ವರಾಜ್ಯಾಧಿಕಾರಿಗಳು ಆಗಲೇಬೇಕಾಗಿದೆ. ಇದು ಪಕ್ಕಾ ಇದೆಯಲ್ಲವೇ? ಯಾರು ರಾಜ್ಯವನ್ನು ಮಾಡಬೇಕಾಗಿದೆ? ತಾವು ರಾಜ್ಯ ಮಾಡುತ್ತೀರಾ ಅಥವಾ ತಮ್ಮ ಮೇಲೆ ಯಾರಾದರೂ ಯಾವುದೇ ರಾಜಾ ರಾಜ್ಯ ಮಾಡುತ್ತಾರಾ? ಇಲ್ಲ. ಎಲ್ಲರೂ ಇಷ್ಟೊಂದು ರಾಜರಾಗಿಬಿಡುತ್ತೀರಾ. ಎಲ್ಲರೂ ರಾಜ್ಯವನ್ನು ಮಾಡುತ್ತೀರಾ! ಪ್ರಜೆಗಳನ್ನು ತಯಾರಿ ಮಾಡಿದ್ದೀರಾ ಅಥವಾ ತಮ್ಮ ಮೇಲೆ ತಾವೇ ರಾಜ್ಯ ಮಾಡುತ್ತೀರಾ? ತಮ್ಮ ಭಾಗ್ಯವನ್ನು ನೋಡಿಕೊಳ್ಳಿ - ಪರಮ ಆತ್ಮ ನನ್ನ ಶಿಕ್ಷಕರಾಗಿದ್ದಾರೆ, ರಾಜ ಪದವಿಯನ್ನು ಕೊಡುವಂತಹವರು. ಹಾಗೂ ನಂತರ ಸದ್ಗುರುವಾಗಿ.. ಗುರುಗಳು ಏನು ಮಾಡುತ್ತಾರೆ? ಮಂತ್ರವನ್ನು ಕೊಡುತ್ತಾರಲ್ಲವೇ. ಸದ್ಗುರು ಯಾವ ಮಂತ್ರವನ್ನು ಕೊಟ್ಟರು? ಮನ್ಮಾನಾಭವ ಸದ್ಗುರುವಿನ ಮುಖಾಂತರ ಮಹಾಮಂತ್ರವು ಸಹ ಸಿಕ್ಕಿದೆ ಹಾಗೂ ಸರ್ವ ವರದಾನಗಳು ಸಿಕ್ಕಿದೆ. ಎಷ್ಟು ವರದಾನಗಳು ಸಿಗುತ್ತದೆ? ವರದಾನಗಳ ಲಿಸ್ಟ್ ನೋಡಿ ಎಷ್ಟು ದೊಡ್ಡದಾಗಿದೆ. ಪ್ರತಿದಿನ ವರದಾನವು ಸಿಗುತ್ತದೆಯಲ್ಲವೆ. ಎಷ್ಟು ಸಮಯದಿಂದ ಸಿಗುತ್ತಿದೆ! ಇಷ್ಟೊಂದು ವರದಾನಗಳನ್ನು ಯಾವುದೇ ಅನುಯಾಯಿಗಳಿಗೆ ಯಾವುದೇ ಗರುವು ಕೊಡುವುದಕ್ಕೆ ಸಾಧ್ಯವಿಲ್ಲ. ಇಂತಹ ಸದ್ಗುರು ಯಾರು ಪ್ರತಿ ನಿತ್ಯ ವರದಾನವನ್ನು ಕೊಡುವಂತಹವರನ್ನು ನೋಡಿದ್ದೀರಾ? ಈಗ ನಶೆಯಿದೆಯಲ್ಲವೇ! (ಹಾಂ ಜೀ) ಬಹಳ ಒಳ್ಳೆಯದು. ಸದಾ ಇಟ್ಟುಕೊಳ್ಳಿ. ಈ ರೀತಿಯಲ್ಲ, ಇಲ್ಲಿಂದ ಬಸ್ಸಿನಲ್ಲಿ ಹೋದ ನಂತರ ನಶೆ ಇಳಿಯುವುದಕ್ಕೆ ಶುರುವಾಗಿ ಬಿಡಲಿ. ಸದಾ ಹೆಚ್ಚುತ್ತಿರಲಿ.

ಬಾಪ್ದಾದಾ ಎಲ್ಲಾ ಮಕ್ಕಳನ್ನು ಸದಾ ಪ್ರತಿ ಸಬ್ಜೆಕ್ಟ್ ನಲ್ಲಿ ನಂಬರ್ ಒನ್ ನೋಡಲು ಬಯಸುತ್ತಾರೆ. ನಂಬರ್ ಒನ್ ಆಗಿದ್ದೀರಾ ಅಥವಾ ಈಗ ಆಗಬೇಕಾ? ನಶೆಯಿಂದ ಹೇಳಿರಿ ನಾವಿಲ್ಲವೆಂದರೆ ಮತ್ಯಾರು ಆಗುವವರು! ವಿದೇಶಿಯರಿಗೆ ಡಬಲ್ ನಶೆಯಿದೆಯಲ್ಲವೇ! ಒಳ್ಳೆಯದು. ನನ್ನ ಒಂದೊಂದು ಮಗುವು ರಾಜಾ ಮಗುವಾಗಿದೆ, ಪ್ರಜೆಯಲ್ಲ ಎಂದು ತಂದೆಯು ಖುಷಿಯಾಗುತ್ತಾರೆ. ಪ್ರಜೆಗಳಂತು ನಂತರ ಬರುತ್ತಾರೆ. ನೀವಂತು ಅದೃಷ್ಟವಂತರಾಗಿದ್ದೀರಿ ಏಕೆಂದರೆ ಇಷ್ಟಾದರೂ ಮಿಲನ ಮಾಡುವ ಅವಕಾಶ ಸಿಕ್ಕಿದೆ. ಟೆಂಟ್ನಲ್ಲಿ ಇರಬೇಕಾಯಿತೆಂದರೆ ಏನಾಯಿತು. ಗಾದೆ ಮೇಲೆ ಮಲಗುತ್ತಿದ್ದೀರಲ್ಲವೇ. ಬ್ರಹ್ಮಾಭೋಜನವಂತು ಚೆನ್ನಾಗಿ ಸಿಗುತ್ತಿದೆಯಲ್ಲವೇ? ಮಣ್ಣನಂತು ಸಿಗುವುದಿಲ್ಲ? ಪ್ರೀತಿಯಿಂದ ತಿನ್ನುತ್ತೀರಲ್ಲವೇ? ಸ್ವಲ್ಪವಂತು ಇರುತ್ತದೆಯಲ್ಲವೇ, ಇದ್ದೇ ಇರುತ್ತದೆ. ಏಕೆ? ಮಾಯೆ ಮತ್ತು ಪ್ರಭುವಿನ ಆಟ ಜೊತೆ-ಜೊತೆಯಲ್ಲಿಯೇ ನಡೆಯುತ್ತದೆ. ಒಂದುವೇಳೆ ಪರಮಾತ್ಮನ ಮುಖಾಂತರ ಮೇಳವಾಗುತ್ತದೆಯೆಂದರೆ ಮಾಯೆಯು ಅವ್ಯವಸ್ಥೆಯನ್ನು ಅವಶ್ಯವಾಗಿ ಮಾಡುತ್ತದೆ. ನಿಮ್ಮ ಕೆಲಸವಾಗಿದೆ ಮೇಳ ಮಾಡುವುದು, ಅದರ ಕೆಲಸವಾಗಿದೆ ಅವ್ಯವಸ್ಥೆ ಮಾಡುತ್ತದೆ. ಅಂದಾಗ ಅವ್ಯವಸ್ಥೆಯು ಆಯಿತು ಮತ್ತು ಮೇಳವು ಆಯಿತು. (ಯಾರೋ ಹೇಳಿದರು ಬಿರುಗಾಳಿ ಹೋಯಿತು) ಏನು ಮಾತಿಲ್ಲ. ನಿಮ್ಮದು ಪುರುಷಾರ್ಥದ ಬಿರುಗಾಳಿಯಾಗಿದೆ ಮತ್ತು ಇದು ಗಾಳಿಯ ಬಿರುಗಾಳಿಯಾಗಿದೆ. ಗಾಬರಿಯಂತು ಆಗುವುದಿಲ್ಲವಲ್ಲವೇ ಏನಾಗುವುದೋ? ಇಲ್ಲ, ಬಿರುಗಾಳಿ ಬರಲಿ ಅಥವಾ ಮಳೆ ಬರಲಿ, ಎಷ್ಟೇ ಏರುಪೇರಾಗಿರಲಿ ಆದರೆ ನಿಮ್ಮ ಮನಸ್ಸು ಅಚಲವಾಗಿದೆಯಲ್ಲವೇ? ಮಾತೆಯರು ಗಾಬರಿಯಂತು ಆಗಿಲ್ಲವೇ, ಟೆಂಟ್ ಹಾರುವುದಿಲ್ಲವೇ, ಏನು ಮಾಡುವುದು? ಸ್ವಲ್ಪ-ಸ್ವಲ್ಪ ಗಾಬರಿಯಾಯಿತೆ, ಏನಾಗುವುದು, ಆರೋಗ್ಯ ಚೆನ್ನಾಗಿರುವುದೇ, ಇಲ್ಲವೇ? ಏನೇ ಆಗಲಿ ಭಕ್ತಿಗಿಂತ ಪೆಟ್ಟು ಮತ್ತು ಪರಿಶ್ರಮ ಕಡಿಮೆಯಿದೆಯಲ್ಲವೇ. ಭಕ್ತಿಯ ಪೆಟ್ಟನ್ನು ತಿನ್ನುವುದಿಲ್ಲವೇ, ಮೋಜಿನಲ್ಲಿರುತ್ತಿರಲ್ಲವೇ. ಅಂದಾಗ ಈ ಮೇಳ ಇಷ್ಟವಾಯಿತೇ ಅಥವಾ ಅವ್ಯವಸ್ಥೆಯನ್ನು ನೋಡಿ ಗಾಬರಿಯಾಯಿತೇ? ಇಲ್ಲ. ಯಾರು ಗಾಬರಿಯಾಗಲಿಲ್ಲವೇ? ಒಬ್ಬಿಬ್ಬರಂತು ಗಾಬರಿಯಾಗಿರಬಹುದು? ಮಜಾ ಬರುತ್ತಿದೆಯಲ್ಲವೇ? ಇನ್ನೂ ಎರಡು ದಿನ ಇಡುವುದೇ? ಒಳ್ಳೆಯದು. ಬಾಪ್ದಾದಾರವರು ಸಹ ಮಾಯೆಯ ಅವ್ಯವಸ್ಥೆಯನ್ನು ನೋಡಿ ಸುತ್ತಾಡುತ್ತಿರುತ್ತಾರೆ. ಆಟವನ್ನು ನೋಡುತ್ತಾರೆ – ಮಕ್ಕಳು ಏನು ಮಾಡುತ್ತಾರೆ ಮತ್ತು ಮಾಯೆಯು ಏನು ಮಾಡುತ್ತದೆ?

ಬಾಪ್ದಾದಾರವರಿಗೆ ಮಕ್ಕಳ ಸ್ನೇಹ ನೋಡಿ ಖುಷಿಯಾಗುತ್ತದೆ. ಸ್ನೇಹವು ಮೇಳವನ್ನು ರಚಿಸಿತು. ತಂದೆಯ ಸ್ನೇಹವು ಇದೆ ಮಕ್ಕಳ ಸ್ನೇಹವು ಇದೆ, ಎರಡು ಸೇರಿದರೆ ಏನಾಗುವುದು? ಮೇಳ. ದೃಶ್ಯವೂ ತುಂಬಾ ಚೆನ್ನಾಗಿದೆ. ಈ ರೀತಿಯೆಂದಾದರೂ ಯೋಚಿಸಿದೀರಾ – ಇಷ್ಟು ದೊಡ್ಡ ಪರಿವಾರವು ಸಿಗುವುದು ಮತ್ತು ಇಷ್ಟು ದೊಡ್ಡ ಪರಿವಾರ ಯಾರಿಗಾದರೂ ಸಿಗುವುದೇ? ನಿಮ್ಮ ಮನೆಗಳೆಷ್ಟಿವೆ? (ಒಂದೇ ಇದೆ) ಮತ್ತು ನಿಮ್ಮ ಸೇವಾಸ್ಥಾನಗಳು ಎಷ್ಟಿವೆ? (ಅನೇಕ ಇವೆ) ಅವುಗಳನ್ನು ಬಾಬಾರವರ ಮನೆ ಎಂದು ಹೇಳುತ್ತಿರಲ್ಲವೇ! ಅಂದಾಗ ಬಾಬಾರವರ ಮನೆ ತಮ್ಮ ಮನೆ. ಪ್ರಪಂಚವು ಹೇಳುತ್ತದೆ ಮನೆಮಠ ಬಿಡುತ್ತಾರೆ ಮತ್ತು ತಾವು ಎಷ್ಟು ಮನೆಗಳನ್ನು ಮಾಡಿದ್ದೀರಿ! ಎಣಿಸಲು ಸಾಧ್ಯವಿಲ್ಲ, ನೆನಪಿಟ್ಟುಕೊಳ್ಳಬೇಕಾಗುತ್ತದೆ. ಇದು ಬಿಡುವುದಲ್ಲ, ಮಾಡುವುದಾಗಿದೆ. ಮತ್ತು ಪರಿವಾರವನ್ನು ಬಿಟ್ಟಿದ್ದೀರಾ ಅಥವಾ ಪರಿವಾರವನ್ನು ಇಷ್ಟು ದೊಡ್ಡದಾಗಿ ಮಾಡಿದ್ದೀರಿ ಯಾವುದು ಸಿಗುವುದೇ ಕಷ್ಟವಾಗಿಬಿಟ್ಟಿದೆ. ಎಲ್ಲಾ ಬ್ರಾಹ್ಮಣರು ಎಷ್ಟಾದರೂ ಎಲ್ಲಾದರೂ ಇರಲಿ, ಒಂದು ಸ್ಥಾನದಲ್ಲಿ ಸಿಗಬಹುದೇ? ಕಷ್ಟವಾಗುವುದಲ್ಲವೇ. ಏಕೆಂದರೆ ಬೇರೆಯವರ ರಾಜ್ಯವಲ್ಲವೇ, ತಮ್ಮ ರಾಜ್ಯವಲ್ಲ. ಆದರೆ ತಂದೆ ಸಿಕ್ಕಿದರು, ಬೇಹದ್ದಿನ ಪರಿವಾರವು ಸಿಕ್ಕಿತು. ಬೇಹದ್ದನ್ನು ನೆನಪು ಮಾಡುವುದರಿಂದ ಬೇಹದ್ದಿನ ಖುಷಿ, ಬೇಹದ್ದಿನ ನಶೆಯಿರುತ್ತದೆ. ಒಂದುವೇಳೆ ಹದ್ದಿನಲ್ಲಿ ತಿಳಿದುಕೊಳ್ಳುತ್ತೀರಿ-ನಾನಂತು ಇಂತಹ ದೇಶದಲ್ಲಿದ್ದೇನೆ, ಇಂತಹ ದೇಶದವನು, ಇಂತಹ ಜೋನ್ದವನಾಗಿದ್ದೇನೆಂದರೆ ಹದ್ದಾಯಿತು ಆದರೆ ಇದಂತು ನಿಮಿತ್ತ ಮಾತ್ರ ಲಕ್ಷಣಕ್ಕೆ ಹೇಳಲಾಗುತ್ತದೆ – ಇಂತಹ ಜೋನ್, ಇಂತಹ ಸ್ಥಾನ. ಬಾಕಿ ತಮ್ಮನ್ನು ಬೇಹದ್ದಿನವರು ಎಂದು ತಿಳಿತುತ್ತೀರಲ್ಲವೇ. ನಿಯಮಗಳನ್ನೂ ಇಡಬೇಕಾಗುತ್ತದೆ. ಕೆಲವರು ಈ ರೀತಿಯೂ ಯೋಚಿಸುತ್ತಾರೆ

ಬಾಡ್ಜ್ ಹಾಕಿಕೊಂಡಾಗಲೇ ಊಟ ಸಿಗುವುದೇ. ನಿಮ್ಮನ್ನು ಊಟದಲ್ಲಿ ಸತಾಯಿಸುತ್ತಾರಲ್ಲವೇ? ಆದರೆ ಇದನ್ನು ಮಾಡಲೇಬೇಕಾಗುತ್ತದೆ. ಏಕೆಂದರೆ ಕಾಯಿದೆಯಲ್ಲಿ ಲಾಭವಿದೆ. ಇದು ಬಂಧನವಲ್ಲ ಆದರೆ ವಿಘ್ನಗಳಿಂದ ನಿರ್ಬಂಧನರನ್ನಾಗಿ ಮಾಡುವ ಸಾಧನವಾಗಿದೆ. ಇದೇನು ಹೊಸ ಮಾತನ್ನು ಹೇಳಿದರು – ಈ ರೀತಿ ಯೋಚಿಸಬೇಡಿ. ಸಂಕಲ್ಪವಂತು ತಂದೆಯ ಹತ್ತಿರ ತಲುಪುತ್ತದೆಯಲ್ಲವೇ. ಆದರೆ ಮರ್ಯಾದಾ ಪುರುಷೋತ್ತಮರು ನೀವಾಗಿದ್ದೀರಲ್ಲವೇ. ಅಥವಾ ಕೇವಲ ದೊಡ್ಡ ದಾದಿಯರು ಮರ್ಯಾದಾ ಪುರುಷೋತ್ತಮರಾಗಿದ್ದಾರೆಯೇ, ನೀವು ಫ್ರೀ ಆಗಿದ್ದೀರಾ? ಮರ್ಯಾದಾ ಪುರುಷೋತ್ತಮ ಅರ್ಥಾತ್ ಮರ್ಯಾದೆಯ ಒಳಗಡೆ ಇರುವಂತಹವರು, ನಡೆಯುವವರು. ಹಾಂ ಜೀ ಪಾಠವನ್ನು ಪಕ್ಕಾ ಇದೆಯಲ್ಲವೇ? ಒಳ್ಳೆಯದು! ಮತ್ತು ಯಾವುದೇ ಮಾತು ಬಂದಾಗ ಹಾಂ ಜೀ ಎಂದು ಹೇಳುತ್ತೀರಾ ಅಥವಾ ಇಲ್ಲವೆಂದು ಹೇಳುವಿರಾ? ಯಾವಾಗ ಇಂತಹ ಮಾತನ್ನು ಹೇಳುತ್ತಾರೆಂದಾಗ ಹಾಂ ಜೀಯ ಬದಲಾಗಿ ಇಲ್ಲ ಎನ್ನುವರಲ್ಲಿ ಇಷ್ಟು ಪಕ್ಕಾ ಆಗಿ ಬಿಡುವರು ತಂದೆಯು ಹೇಳಿದರು ಸಹ ಕೇಳುವುದಿಲ್ಲ. ಹೇಗೆ ಸ್ಥಾಪನೆಯಲ್ಲಿ ಯಾವಾಗ ಚಿಕ್ಕ-ಚಿಕ್ಕ ಮಕ್ಕಳು ಬಂದರೆ ಬಾಪ್ದಾದಾರವರು ಅವರಿಗೆ ಪಾಠವನ್ನು ಪಕ್ಕಾ ಮಾಡಿಸಲು ಯಾವಾಗಲು ಹೇಳುತ್ತಿದ್ದರು ಇಲ್ಲವೆಂದು (ನಾ) ಹೇಳುವುದೆಂದರೆ ನಾಸ್ತಿಕರು, ಹಾಂ ಎಂದು ಹೇಳುವುದೆಂದರೆ ಆಸ್ತಿಕರು. ಅಂದಾಗ ನೀವೆಲ್ಲರೂ ಯಾರಾಗಿದ್ದೀರಿ? ಆಸ್ತಿಕರಾಗಿದ್ದೀರಿ. ನಾಸ್ತಿಕರಲ್ಲ ಅಲ್ಲವೇ! ಕೆಲ-ಕೆಲವೊಮ್ಮೆ ಆಗಿಬಿಡುತ್ತೀರಿ. ಆಟವಾಡುತ್ತೀರಿ. ಮಾಯೆಯದು ಸಹ ಜ್ಞಾನಪೂರ್ಣರಾಗಿದ್ದೀರಿ! ಏಕೆಂದರೆ ಮಾಯೆಯು ಜ್ಞಾನಪೂರ್ಣವಾಗಿದೆ. ಬಿಳಿಸುವುದರಲ್ಲಿ ಮಾಯೆ ಜ್ಞಾನಪೂರ್ಣ ಮತ್ತು ಹಾರುವುದರಲ್ಲಿ ನೀವು ಜ್ಞಾನಪೂರ್ಣರಾಗಿದ್ದೀರಿ. ಮಾಯೆಯು ನೋಡುತ್ತದೆ ಇವರ ಹಾರುವಿಕೆಯಲ್ಲಿ ಸ್ವಲ್ಪ ಮೇಲೆ-ಕೆಳಗಾಗಿದ್ದರೆಂದು, ನೋಡಿ ಆಕ್ರಮಣ ಮಾಡುತ್ತದೆ. ಮತ್ತು ನೀವು ಜ್ಞಾನಪೂರ್ಣರಾಗುವ ಕಾರಣ ತಿಳಿದುಕೊಳ್ಳುತ್ತೀರಿ, ಸೋಲುವುದಿಲ್ಲ ಆದರೆ ವಿಜಯ ಮಾಲೆ ಕೊರಳಲ್ಲಿ ಬಿಳುತ್ತದೆ. ಎಲ್ಲರ ಕೊರಳಲ್ಲಿ ವಿಜಯ ಮಾಲೆವಿದೆಯೇ ಅಥವಾ ಕೆಲವೊಮ್ಮೆ ತೆಗೆದು ಬಿಡುತ್ತೀರಾ? ಒಳ್ಳೆಯದು.

ಹಿಂದೆಯಿರುವವರು ಮೋಜಿನಲ್ಲಿದ್ದೀರಾ? ಇದು ಸಹ ಮಧುಬನದೇ ಸ್ಥಾನವಾಯಿತಲ್ಲವೇ, ಮಧುಬನವನ್ನು ಬಿಟ್ಟರೇ ಬೇರೆ ಎಲ್ಲಾದರೂ ಇಷ್ಟು ದೊಡ್ಡ ಮೇಳವಾಗುವುದಕ್ಕೆ ಸಾಧ್ಯವೇ? ಸಾಧ್ಯವಿಲ್ಲ. ಮಧುಬನವಾಯಿತು ಬೇಹದ್ದಿನ ಮನೆ. ಇಲ್ಲಿ ಎಲ್ಲವೂ ಬೇಹದ್ದಿನದಾಗಿದೆ ಬೇರೆ-ಬೇರೆ ಜಾಗವನ್ನು ಸಹ ನೋಡಬೇಕಾಗುತ್ತದೆ ಮತ್ತು ಇಲ್ಲಿ ಸಂಕಲ್ಪ ಮಾಡಿದ್ದೀರಿ ಮತ್ತು ಪೂರ್ಣ ಆಯಿತು. ಎಲ್ಲರು ತಮ್ಮ ಭಾಗ್ಯದ ಮೂಲಕ ಪರಮಾತ್ಮನ ಮೇಳದಲ್ಲಿ ತಲುಪಿಬಿಟ್ಟಿದ್ದೀರಿ. ಯಾರು ಮೊದಲನೇ ಬಾರಿ ಈ ಕಲ್ಪದಲ್ಲಿ ಬಂದಿದ್ದೀರಿ ಅವರು ಕೈ ಎತ್ತಿರಿ. (ಅಂದಾಜು 13-14 ಸಾವಿರ ಸಹೋದರ-ಸಹೋದರಿಯರ ಸಭೆಯಾಗಿದೆ, ಅದರಲ್ಲಿ ಬಹಳಷ್ಟು ಹೊಸ ಸಹೋದರ-ಸಹೋದರಿಯರಿದ್ದರು) ಒಳ್ಳೆಯದಾಗಿದೆ, ಟಿ. ವಿ. ಯಲ್ಲಿ ನೋಡುತ್ತಿದ್ದೀರಿ. ಬಹುತೇಕ ವಿಜ್ಞಾನದ ಸಾಧನೆಗಳು ಈಗೀಗ ಬಂದಿರುವುದನ್ನು ಸಹ ನೋಡಿ. ಕೆಲ ವರ್ಷಗಳ ಮೊದಲು ಈ ವಿಜ್ಞಾನದ ಸಾಧನೆಗಳು ಇರಲಿಲ್ಲ. ಆದರೆ ಯಾವುದಕ್ಕೆ ಬಂದಿವೆ? ನಿಮಗಾಗಿ. ಬಾಪ್ದಾದಾರವರು ವಿಜ್ಞಾನಿ ಆತ್ಮಗಳಿಗೆ ಶುಭಾಷಯಗಳನ್ನು ತಿಳಿಸುತ್ತಾರೆ. ಏಕೆಂದರೆ ತಂದೆಯ ಮಕ್ಕಳು ಅದರಿಂದ ಸುಖವನ್ನು ತೆಗೆದುಕೊಳ್ಳುತ್ತಿದ್ದಾರಲ್ಲವೇ. ಎಷ್ಟು ಚೆನ್ನಾಗೆನಿಸುತ್ತಿದೆ. ಆದರೆ ಬಾಪ್ದಾದಾ ಏನು ಬಯಸುತ್ತಾರೆ? ಸ್ಥಾಪನೆಯಾಗಿ ಎಷ್ಟು ವರ್ಷಗಳಾಯಿತು? ಡೈಮಂಡ್ ಜುಬಲಿ ಆಚರಿಸುವ ತಯಾರಿ ಮಾಡುತ್ತಿದ್ದೀರಲ್ಲವೇ. ಬಾಪ್ದಾದಾರವರು ಈಗ ಎಲ್ಲಾ ಮಕ್ಕಳನ್ನು ರಾಜಾ ಮಕ್ಕಳೆಂದರಲ್ಲವೇ, ಎಲ್ಲರು ರಾಜಾರಾಗಿದ್ದಾರೆ. ರಾಜಾ ಸಿಂಹಾಸನಾಧಿಕಾರಿಯಾಗಿದ್ದಾರಲ್ಲವೇ? ರಾಜ್ಯದ ಲಕ್ಷಣ ಕಿರೀಟ, ಸಿಂಹಾಸನ ಮತ್ತು ತಿಲಕವಾಗಿದೆ. ಬಾಪ್ದಾದಾ ಈ ವರ್ಷದಲ್ಲಿ ಹೊಸಬರಿದ್ದೀರೋ ಅಥವಾ ಹಳಬರಿದ್ದೀರೋ, ಸಮಾಪ್ತಿಯ ಸಮಯವಂತು ಹೊಸವರಿಗೂ ಸಮೀಪವಿದೆ ಮತ್ತು ಹಳಬರಿಗೂ ಸಮೀಪವಿದೆ. ಈ ರೀತಿ ತಿಳಿದುಕೊಳ್ಳಬಾರದು ನಮಗೂ ಸಹ 60 ವರ್ಷ ಬಹುಶಃ ಸಿಗುವುದು. ಇಲ್ಲ, ನೀವು ಮೇಕಪ್ (ಬೇಗನೆ) ಮಾಡಬೇಕು. ಒಂದುವೇಳೆ ಕೊನೆಗೆ ಬಂದಿದ್ದೀರೆಂದಮೇಲೆ ತೀವ್ರವಾಗಿ ಹೋಗಬೇಕು. ಆದರೆ ಸಂಪನ್ನರಾಗುವ, ಸಮಾಪ್ತಿಯ ಸಮಯ ಎಲ್ಲರದು ಒಂದೇ ಇದೆ ಇದಕ್ಕಾಗಿ ಭಲೇ ಹೊಸಬರಾಗಲಿ ಅಥವಾ ಹಳಬರಾಗಲಿ ಆದರೆ ನಾನು ಸ್ವರಾಜ್ಯ ಅಧಿಕಾರಿ ಆತ್ಮನಾಗಿದ್ದೇನೆ - ಸದಾ ಸ್ಮೃತಿಯ ತಿಲಕವಿದೆಯೇ. ಕೆಲವೊಮ್ಮೆ ಅಳಿಸಿ ಹೋಗುತ್ತದೆ, ಕೆಲವೊಮ್ಮೆ ಇರುತ್ತದೆ... ಇಲ್ಲ, ರಾಜ್ಯಾಧಿಕಾರಿ ಅರ್ಥಾತ್ ತಿಲಕಧಾರಿ – ಈ ಸ್ಮೃತಿಯ ತಿಲಕ ಅವಿನಾಶಿಯಾಗಿರಲಿ, ಸಾಧಾರಣವಲ್ಲ. ನಾನು ತಿಲಕಧಾರಿಯಾಗಿದ್ದೇನೆ, ನಾನು ವಿಶ್ವಕಲ್ಯಾಣದ ಜವಾಬ್ದಾರಿಯ ಕಿರೀಟಧಾರಿಯಾಗಿದ್ದೇನೆ. ಎಷ್ಟು ದೊಡ್ಡ ವಿಶ್ವವಾಗಿದೆ ಮತ್ತು ನೀವೆಲ್ಲರು ವಿಶ್ವ ಕಲ್ಯಾಣಕಾರಿಯಾಗಿದ್ದೀರಿ. ಒಬ್ಬರೇ ತಂದೆಯಿಲ್ಲ. ತಂದೆಯ ಜೊತೆ ನೀವೆಲ್ಲರೂ ಇದ್ದೀರಿ. ವಿಶ್ವ ಕಲ್ಯಾಣದ ಜವಾಬ್ದಾರಿಯ ಕಿರೀಟಧಾರಿ ಮತ್ತು ಸದಾ ತಂದೆಯ ಹೃದಯಸಿಂಹಾಸನಾಧಿಕಾರಿ. ಕೆಳಗಡೆ ಬರಬಾರದು. ಸದಾ ಸಿಂಹಾಸನಾಧಿಕಾರಿ. ಹಾಗೆ ನೋಡಿದರೆ ಯಾರು ಬಹಳ ಪ್ರಿಯ, ಮುದ್ದು ಮಕ್ಕಳಾಗಿರುತ್ತಾರೆಂದರೆ ತಂದೆ-ತಾಯಿಯು ಅವರನ್ನು ಮಣ್ಣಿನಲ್ಲಿ ಹೋಗಲು ಬಿಡುವುದಿಲ್ಲ, ನೆಲದ ಮೇಲೆ ಕಾಲಿಡಲು ಬಿಡುವುದಿಲ್ಲ. ಅಂದಾಗ ನೀವೆಷ್ಟು ಮುದ್ದು ಮಕ್ಕಳಾಗಿದ್ದೀರಿ! ಮುದ್ದು ಮಕ್ಕಳಾಗಿದ್ದೀರಾ ಅಥವಾ ಬರುವವರಿದ್ದಾರೋ? ನೀವಾಗಿದ್ದೀರಿ. ಸಿಂಹಾಸನವನ್ನು ಬಿಟ್ಟು ಸಾಧಾರಣ ಸ್ವರೂಪ, ಸಾಧಾರಣ ಸಂಕಲ್ಪ... ಈ ಮಣ್ಣಿನಲ್ಲಿ ಅಥವಾ ಧರಣಿಯಲ್ಲಿ ಕಾಲಿಡಬೇಡಿ. ಬುದ್ಧಿ ರೂಪಿ ಕಾಲು ಸದಾ ಸಿಂಹಾಸನಾಧಿಕಾರಿಯಾಗಿರಲಿ. ಪರಮಾತ್ಮ ತಂದೆಯ ಮಕ್ಕಳಾಗಿದ್ದಾರೆ. ಮಹಾತ್ಮ, ಧರ್ಮಾತ್ಮರವರಲ್ಲ, ಪರಮ ಆತ್ಮರವರಾಗಿದ್ದೀರಿ. ಈಗಂತು ಎಲ್ಲರು ನಶೆಯಲ್ಲಿ ಚೆನ್ನಾಗಿದ್ದೀರಿ, ಅದಂತು ಕಾಣುತ್ತಿದೆ ಆದರೆ ಸದಾ ಇರುವುದಲ್ಲವೇ? ಸ್ವಲ್ಪ-ಸ್ವಲ್ಪ ಇರುವುದು ನಂತರ ಯುದ್ಧ ಮಾಡುವಿರಿ, ನಂತರ ವಿಜಯ ಪ್ರಾಪ್ತಿ ಮಾಡುವಿರಿ ಈ ರೀತಿಯಿಲ್ಲವೇ? ಬ್ರಾಹ್ಮಣರಾಗಿದ್ದೀರಾ ಅಥವಾ ಕ್ಷತ್ರಿಯರಾಗಿದ್ದೀರಾ?

ಬ್ರಾಹ್ಮಣರಾಗಿದ್ದೀರಿ. ಕ್ಷತ್ರಿಯರಾಗಿಲ್ಲ, ಯುದ್ಧವನ್ನು ಮಾಡುವುದಿಲ್ಲವೇ? ಕೆಲವೊಮ್ಮೆ ಬ್ರಾಹ್ಮಣರಾಗುತ್ತೀರಿ, ಕೆಲವೊಮ್ಮೆ ಕ್ಷತ್ರಿಯರಾಗುತ್ತೀರಿ? ಒಂದುವೇಳೆ ಮಾಯೆಯ ಜೊತೆ ಯುದ್ಧ ಮಾಡಬೇಕಾಗುತ್ತದೆ ಎಂದರೆ ಕ್ಷತ್ರಿಯರಾದಿರಿ. ಬ್ರಾಹ್ಮಣರೆಂದರೆ ವಿಜಯಿ ಮತ್ತು ಕ್ಷತ್ರಿಯರೆಂದರೆ ಯುದ್ಧ ಮಾಡುವವರು. ಬಾಪ್ದಾದಾರವರಿಗೆ ಕೆಲವೊಮ್ಮೆ ಮಕ್ಕಳ ಮೇಲೆ ಬಹಳ ದಯೆ ಬರುತ್ತದೆ, ಯೋಗದಲ್ಲಿ ಕುಳಿತುಕೊಳ್ಳುತ್ತಾರೆ ಮತ್ತು ಯುದ್ಧವನ್ನು ಮಾಡುತ್ತಾರೆ. ಒಂದು ಘಂಟೆ ಯೋಗವನ್ನು ಜೋಡಿಸಿದೆನು ಎಂದು ಹೇಳುತ್ತಾರೆ ಆದರೆ ಒಂದು ಘಂಟೆಯಲ್ಲಿ ಯುದ್ಧ ಎಷ್ಟು ಸಮಯ ನಡೆಯಿತು ಮತ್ತು ಯೋಗ ಎಷ್ಟು ಸಮಯವಿತ್ತು? ಒಂದುವೇಳೆ ಯಾವುದೇ ಕಾರಣದಿಂದ ಅನುಭೂತಿಯಾಗಲಿಲ್ಲವೆಂದರೆ ಅವಶ್ಯ ಯುದ್ಧದ ಸ್ಥಿತಿಯಾಗಿದೆ. ಬಾಪ್ದಾದಾರವರು ಹೇಳುತ್ತಾರೆ – ಯೋಗಿ ಮಕ್ಕಳಾಗಿದ್ದೀರಿ ಮತ್ತು ಯುದ್ಧದ ಮಕ್ಕಳಾಗಿಬಿಡುತ್ತೀರಿ. ಎಲ್ಲಿಯವರೆಗೆ ಯುದ್ಧ ಮಾಡುವಿರಿ? ಅಂತಿಮದವರೆಗು ಯುದ್ಧ ಮಾಡುವಿರಿ. ಭಲೇ ಯುದ್ಧ ಮಾಡಿ ಎಂದು ಅನುಮತಿ ಕೊಟ್ಟು ಬಿಡುವುದೇ! ಅನುಮತಿ ಬೇಕೆ? ಬೇಕಾಗಿಲ್ಲವೇ? ಮತ್ತೆ ಏಕೆ ಮಾಡುತ್ತೀರಿ? ಬಲಹೀನರಾಗಿಬಿಡುತ್ತೀರೆಂದರೆ ಮಾಯೆ ಎಷ್ಟು ಅಧೀನರಾಗಿ ಮಾಡಿ ಬಿಡುತ್ತದೆಯೆಂದರೆ ಬಯಸುವುದಿಲ್ಲ ಆದರೆ ಮಾಡಿಬಿಡುತ್ತೀರಿ. ಹೇಗೆ ಕೆಲ-ಕೆಲ ಸೇವಕರು ಬಹಳ ಮುಗ್ಧರಾಗಿರುತ್ತಾರೆಂದರೆ ಮಾಲೀಕರು ಅವರನ್ನು ಅಧೀನರನ್ನಾಗಿ ಮಾಡಿಕೊಳ್ಳುತ್ತಾರೆ, ಸೇವಕರು ಯಾರು ಮಾಡುವುದಿಲ್ಲ ಅವರಿಗೂ ಮಾಲಿಇಕರು ಹೇಳುತ್ತಾರೆ ಕೆಲಸ ಮಾಡಿ, ಇಲ್ಲವೆಂದರೆ ನೌಕರಿ ಏಕೆ ಮಾಡುತ್ತೀರಿ. ಮಾಯೆಯು ಹೀಗೆ ಹೇಳುತ್ತದೆ, ನೀವು ಬಯಸುವುದಿಲ್ಲ ಆದರೆ ಬಲಹೀನತೆಯ ಕಾರಣ ಮಾಯೆಯ ಅಧೀನರಾಗಬೇಕಾಗುತ್ತದೆ. ಆ ಸಮಯ ಯೋಗಿಯಾಗಿದ್ದೀರಾ ಅಥವಾ ಯೋದ್ಧರಾಗಿದ್ದೀರಾ? ಯೋಗಿವೆಂದು ಹೇಳುವುದಿಲ್ಲವಲ್ಲವೇ? ಅಂದಾಗ ಬಾಪ್ದಾದಾ ಇದೇ ಬಯಸುತ್ತಾರೆ ಪ್ರತಿಯೊಂದು ಮಗುವು ಯೋಗಿ ಮಗುವಾಗಲಿ, ಯುದ್ಧ ಮಾಡುವವರಲ್ಲ. ಬಾಪ್ದಾದಾರವರ ಮಕ್ಕಳ ಯುದ್ಧದ ಪರಿಶ್ರಮ ಇಷ್ಟವಿಲ್ಲ. ಪರಮಾತ್ಮ ಮಕ್ಕಳಂತು ಸದಾ ಮೋಜಿನಲ್ಲಿರುವಂತಹವರು, ಮಜಾದಲ್ಲಿ ಇರುವಂತಹವರು, ಯುದ್ಧದ ಪರಿಶ್ರಮದವರಲ್ಲ. ಏನಾಗುವಿರಿ? ಯೋಗಿ ಮಕ್ಕಳಾಗಿದ್ದೀರಾ ಅಥವಾ ಯುದ್ಧ ಮಕ್ಕಳಾಗಿದ್ದೀರಾ? ಯೋಗಿಗಳಾಗಿದ್ದೀರಾ ಅಥವಾ ಸ್ವಲ್ಪ ಸ್ವಲ್ಪ ಯುದ್ಧ ಮಾಡುವುದು ಇಷ್ಟವೇ? ಹೇಳುವುದರಲ್ಲಿ ಹಾಂ ಹಾಂ ಎನ್ನುವಿರಿ ಮತ್ತು ಯಾವಾಗ ಮಾಡುವಿರಿ ಆಗ ಫೋಟೋ ತೆಗೆಯಲಾಗುತ್ತದೆ. ಈ ವರ್ಷ ಎಲ್ಲರ ಚಾರ್ಟ್ ಆಗಿರಲಿ - ಸದಾ ರಾಜ್ಯ ಅಧಿಕಾರಿ. ಅಧೀನತೆ ಸಮಾಪ್ತಿ.

ಸರ್ವ ಕಡೆಯ ದೇಶ-ವಿದೇಶದ ಸರ್ವ ಸೂಕ್ಷ್ಮ ಸ್ವರೂಪದಿಂದ ದೃಶ್ಯವನ್ನು ನೋಡುವಂತಹ ಆತ್ಮರು, ನಾಲ್ಕು ಕಡೆಯ ಸದಾ ಶ್ರೇಷ್ಠ ಪಾಲನೆಯಲ್ಲಿ ಬೆಳೆಯುತ್ತಿರುವಂತಹ, ಶ್ರೇಷ್ಠ ವಿದ್ಯೆಯಿಂದ ರಾಜ್ಯ ಪದವಿಯನ್ನು ಪಡೆಯುವಂತಹ ಆತ್ಮರು, ಸದ್ಗುರುವಿನ ಮೂಲಕ ಸರ್ವ ವರದಾನ ಪ್ರಾಪ್ತಿ ಮಾಡಿಕೊಳ್ಳುವಂತಹ ಆತ್ಮರು, ಸದಾ ಮಾಯಾಜೀತ್ ವಿಜಯಿ ರತ್ನ, ಸದಾ ಯುದ್ಧವನ್ನು ಬಿಟ್ಟು ರಾಜಯೋಗಿ ಸ್ಥಿತಿಯಲ್ಲಿ ಸ್ಥಿತರಾಗಿರುವಂತಹ ಸರ್ವ ಶ್ರೇಷ್ಠ ಆತ್ಮರಿಗೆ ಬಾಪ್ದಾದಾರವರ ನೆನಪು-ಪ್ರೀತಿ ಮತ್ತು ನಮಸ್ತೆ.

**ವರದಾನ:** ವರದಾನ: ಏಕಾಂತ ಮತ್ತು ಏಕಾಗ್ರತೆಯ ಅಟೆನ್ಷನ್ ಮೂಲಕ ತೀವ್ರಗತಿಯಿಂದ ಸೂಕ್ಷ್ಮ ಸೇವೆ ಮಾಡುವಂತಹ ಸತ್ಯ ಸೇವಾಧಾರಿ ಭವ.

ದೂರದಲ್ಲಿ ಕುಳಿತಿದ್ದರೂ ವಿಶ್ವದ ಆತ್ಮರುಗಳ ಸೇವೆ ಮಾಡುವುದಕ್ಕಾಗಿ ಮನಸ್ಸು ಮತ್ತು ಬುದ್ಧಿ ಸದಾ ಫ್ರೀಯಾಗಿರಬೇಕು. ಸಣ್ಣ-ಸಣ್ಣ ಸಾಧಾರಣ ಮಾತಿನಲ್ಲಿ ಮನಸ್ಸು ಮತ್ತು ಬುದ್ಧಿಯನ್ನು ಬಿಜಿಯಾಗಿಟ್ಟುಕೊಳ್ಳಬೇಡಿ. ತೀವ್ರಗತಿಯ ಸೂಕ್ಷ್ಮ ಸೇವೆಗಾಗಿ ಏಕಾಂತ ಮತ್ತು ಏಕಾಗ್ರತೆಯ ಮೇಲೆ ವಿಶೇಷ ಗಮನಕೊಡಿ. ಬಿಜಿಯಾಗಿದ್ದರೂ ಸಹ ಮಧ್ಯೆ-ಮಧ್ಯೆ ಒಂದು ಗಳಿಗೆ ಎರಡು ಗಳಿಗೆ ತೆಗೆದು ಏಕಾಂತದ ಅನುಭವ ಮಾಡಿ. ಹೊರಗಿನ ಪರಿಸ್ಥಿತಿ ಭಲೇ ಹಲ್-ಚಲ್ ನದಾಗಿರಬಹುದು ಆದರೆ ಮನಸ್ಸು ಬುದ್ಧಿಯನ್ನು ಯಾವ ಸಮಯ ಬೇಕೊ ಒಬ್ಬರ ಅಂತ್ಯದಲ್ಲಿ ಸೆಕೆಂಡ್ ನಲ್ಲಿ ಏಕಾಗ್ರ ಮಾಡಿ ಆಗ ಸತ್ಯ ಸೇವಾಧಾರಿಯಾಗಿ ಬೇಹದ್ದಿನ ಸೇವೆಗೆ ನಿಮಿತ್ತ ಆಗಲು ಸಾಧ್ಯ.

**ಸ್ಲೋಗನ್:** ಸ್ಲೋಗನ್: ಜ್ಞಾನಿತ್ವ ಆತ್ಮ ಅವರೇ ಆಗಿದ್ದಾರೆ ಯಾರು ಜ್ಞಾನದ ಎಲ್ಲಾ ರಹಸ್ಯವನ್ನು ತಿಳಿದು ರಹಸ್ಯಯುಕ್ತ, ಯುಕ್ತಿಯುಕ್ತ ಮತ್ತು ಯೋಗಯುಕ್ತವಾಗಿ ಕರ್ಮ ಮಾಡುತ್ತಾರೆ.